<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,</u>

<u>ಶ್ರೀರಂಗಪಟ್ಟಣ</u>

PW-1

**ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ 03.12.2025**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಮಂಟಿಯಲ್ಲಿರುವ ಜಾಗದ ಅಗ್ರಿಮೆಂಟ್ ಯಾರ ಯಾರ ನಡುವೆ ಆಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಹಾಗೂ ದೇವರಾಜ್ ರವರ ನಡುವೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಗ್ರಿಮೆಂಟ್ ಯಾವಾಗ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

ವಾಟರ್ ಪ್ಲಾಂಟ್ ಅಗ್ರಿಮೆಂಟ್ ನಿಮ್ಮ ತಮ್ಮನಾದ ಚೌಡ ಹಾಗೂ ದೇವರಾಜ್ ರವರ ನಡುವೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ನಡುವೆ ಮುಖಾ ಮುಖಿ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವ್ಯವಹಾರವು ನನ್ನ ತಮ್ಮ ಹಾಗೂ ಆರೋಪಿ ನಡುವೆ ಆಗಿರುತ್ತದೆ ಎಂದರೆ ಸರಿಯಲ್ಲ.

ವಾಟರ್ ಪ್ಲಾಂಟ್ ನ ಪ್ರಾರಂಭ ಮಾಡಿದ 6 ತಿಂಗಳ ನಂತರ ವಾಟರ್ ಪ್ಲಾಂಟ್ ನಿಂದ ನಷ್ಟ ಹೊಂದಿ ಆರುೋಪಿ ಆ ವಾಟರ್ ಪ್ಲಾಂಟ್ ಸ್ಥಳವನು ಬಿಟ್ಟಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ತುಂಬಾ ವರ್ಷಗಳ ಕಾಲ ವಾಟರ್ ಪ್ಲಾಂಟ್ ಅನ್ನು ನಡೆಸಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳ ಕಾಲ ವಾಟರ್ ಪ್ಲಾಂಟ್ ನಡೆದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ವರ್ಷಾನುಗಟ್ಟಲೆ ನಡೆದಿದ್ದು ನಿಖರವಾಗಿ ಎಷ್ಟು ವರ್ಷ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ವಾಟರ್ ಪ್ಲಾಂಟ್ ಗೆ ಸಂಬಂಧಿಸಿದಂತೆ ವ್ಯವಹಾರವು ನನ್ನ ತಮ್ಮ ಹಾಗೂ ಆರೋಪಿ ನಡುವೆ ಆಗಿದ್ದು ಆ ಸಂದರ್ಭದಲ್ಲಿ ಆರೋಪಿ ನನ್ನ ತಮ್ಮನಿಗೆ ನೀಡಿದ್ದ ಚೆಕ್ ಅನ್ನು ನಾನು ಆತನ ಕಡೆಯಿಂದ ಪಡೆದುಕೊಂಡು ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಖುದ್ದಾಗಿ ಬೇಟಿ ಮಾಡಿರುವುದಿಲ್ಲ ಎಂದರೆ

ಸರಿಯಲ್ಲ. ದಿನಾಂಕ 10.07.2020 ರಂದು ಆರೋಪಿ ನನ್ನ ಬಳಿ ಬಂದು ಸಾಲ ಕೇಳಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಆರೋಪಿ ಸಾಲ ಕೇಳಲು ಒಬ್ಬರೇ ಬಂದಿದ್ದರು. ಸಾಕ್ಷಿಯು ಮುಂದುವರೆದು ಮುಂಚಿತವಾಗಿ ಬರುತ್ತೇನೆ ಎಂದು ಹೇಳಿ ಬಂದಿದ್ದರು ಎಂದು ನುಡಿಯುತ್ತಾರೆ. ಆರೋಪಿ ಮುಂಚಿತವಾಗಿ ಬರುತ್ತೇನೆ ಎಂದು ಹೇಳಿದ ದಿನಾಂಕ ನನಗೆ ನೆನಪಿಲ್ಲ. ಸಾಲ ಕೇಳಲು ಬರುತ್ತೇನೆ ಎಂದು ಆರೋಪಿ ನನಗೆ ಫೋನ್ ನಲ್ಲಿ ತಿಳಿಸಿರುವುದಿಲ್ಲ.

8 ವರೆ ಲಕ್ಷ ರೂ. ನಿಮ್ಮ ಬಳಿ ಯಾವ ರೀತಿ ಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಿಲ್ಡಿಂಗ್ ಕಟ್ಟುವ ಸಲುವಾಗಿ ನನ್ನ ಬಳಿ ಅಂದಾಜು ರೂ.20 ಲಕ್ಷ ಇತ್ತು ಎಂದು ಹಾಗೂ ನನಗೆ ತಿಂಗಳಿಗೆ ಬಾಡಿಗೆ ರೂಪದಲ್ಲಿ ರೂ.40,000/- ಬರುತ್ತಿತ್ತು ಎಂದು ನುಡಿಯುತ್ತಾರೆ.

ದಿನಾಂಕ 10.07.2020 ರಂದು 8 ವರೆ ಲಕ್ಷ ರೂ. ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. 8 ವರೆ ಲಕ್ಷ ರೂ. ಹಣವನ್ನು ನಿಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೃಷಿ ಇಂದ ಬಂದ ಆದಾಯ ಆದ ಕಾರಣ ತೋರಿಸಿಲ್ಲ ಎಂದು ನುಡಿಯುತ್ತಾರೆ. ಯಾವ ಬೆಳೆಯಿಂದ ನನಗೆ ಹಣ ಬಂದಿರುತ್ತದೆ ಎಂದು ನಾನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಆ ರೀತಿ ಬರೆಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

2019 ರಿಂದ 2021 ರವರೆಗೆ ಕೋವಿಡ್ -19 ಸಾಂಕ್ರಮಿಕ ರೋಗ ಇತ್ತು ಎಂದರೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೋವಿಡ್ ಸಂದರ್ಬದಲ್ಲಿ ಸಾರ್ವಜನಿಕರಿಗೆ ಹಣವನ್ನು ಬ್ಯಾಂಕಿನಿಂದ ತೆಗೆಯಲು ತೀರಾ ತೊಂದರೆ ಹಾಗೂ ಅಭಾವ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಣ ನೀಡಿದ 2 ತಿಂಗಳ ನಂತರ ಆರೋಪಿಯನ್ನು ನೀವು ಎಲ್ಲಿ ಬೇಟಿ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೆ.ಆರ್.ಎಸ್. ರಸ್ತೆಯಲ್ಲಿ ಬೇಟಿ

ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೂ ಹಾಗೂ ಆರೋಪಿಗೂ ಪರಿಚಯ ಇಲ್ಲದ ಕಾರಣ ಆ ರೀತಿ ಹಣ ಮರುಪಾವತಿ ಮಾಡುವಂತೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

8 ವರೆ ಲಕ್ಷ ರೂ. ಹಣ ದೊಡ್ಡ ಮೊತ್ತದ ಹಣ ಎಂದರೆ ಸರಿ.

ಹಣ ನೀಡುವ ಸಂದರ್ಬದಲ್ಲಿ ನೀವು ಆರೋಪಿ ಕಡೆಯಿಂದ ಪ್ರನೋಟ್ ಆಗಲಿ ಸಾಲದ ಕರಾರು ಪತ್ರವನ್ನು ಬರೆಯಿಸಿಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಬರೆಯಿಸಿಕೊಳ್ಳಲು ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವೆರದು ಒಡವೆಗಳನ್ನು ರೀನಿವಲ್ ಮಾಡಿಸಿಕೊಂಡು 2 ತಿಂಗಳಿನಲ್ಲಿ ವಾಪಾಸ್ ನೀಡುತ್ತೇನೆ ಎಂದು ಆರೋಪಿ ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ದೂರಿನಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

ಸಾಮಾನ್ಯವಾಗಿ ಒಡವೆಯನ್ನು ರೀನಿವಲ್ ಮಾಡಿದಾಗ ಅದೇ ದಿನ ಅದೇ ಸಂದರ್ಬದಲ್ಲಿ ಹಣವನ್ನು ನೀಡುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಒಡವೆ ರೀನಿವಲ್ ಜೊತೆಗೆ ಆರೋಪಿಗೆ ಬೇರೆ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ದೂರಿನಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

ನಾನು ನಿಜವಾಗಲೂ ಆರೋಪಿಗೆ ಹಣ ನೀಡಿದ್ದರೆ ಈ ಮೇಲಿನ ವಿಚಾರಗಳೆಲ್ಲವನ್ನು ಕೂಲಂಕುಷವಾಗಿ ದೂರಿನಲ್ಲಿ ಬರೆಯಿಸಿ ದೂರನ್ನು ಸಲ್ಲಿಸುತ್ತಿದ್ದೆನು ಎಂದರೆ ಸರಿಯಲ್ಲ.

ಹಣ ನೀಡಿದ 2 ತಿಂಗಳ ನಂತರ ಆರೋಪಿ ನನಗೆ ಚೆಕ್ ಅನ್ನು ನೀಡಿರುತ್ತಾರೆ. ಸಾಮಾನ್ಯವಾಗಿ ಹಣ ನೀಡುವ ಸಂದರ್ಬದಲ್ಲಿ ಹಣ ಕೊಡುವವರು ಭದ್ರತೆಗಾಗಿ ಯಾವುದಾದರೂ ಒಂದು ದಾಖಲೆಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಒಂದು ವೇಳೆ ನಾನು ಹಣನೀಡಿದ್ದೆ ಆಗಿದ್ದರೆ ಆರೋಪಿ ಕಡೆಯಿಂದ ಯಾವುದಾದರೂ ದಾಖಲೆಯನ್ನು ಪಡೆದುಕೊಳ್ಳುತ್ತಿದ್ದು, ಆರೋಪಿ ವಾಟರ್ ಪ್ಲಾಂಟ್ ನಿಂದ ಚೆಕ್ ಅನ್ನು ತೆಗೆದುಕೊಂಡು ಬಂದು ನಾನು ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2009 ರಿಂದ ಆರೋಪಿ ನನಗೆ ಪರಿಚಯ

ಇರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ನನಗೆ 2009 ರಿಂದ ಪರಿಚಯ ಎಂದು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.